ಓಡುತ್ತಾ ಬಂದ ನಾನು ಗಕ್ಕನೆ ನಿಂತೆ. ನನ್ನ ಪುಟ್ಟ ಪಾದಗಳು ತಡವರಿಸಿದವು. ನವಿಲುಗರಿಯಿಂದ ಅಲಂಕೃತವಾದ ಮೆತ್ತನೆಯ ಆಸನದಲ್ಲಿ ನನ್ನ ತಂದೆ ಆರಾಮವಾಗಿ ವಿರಾಜಮಾನವಾಗಿದ್ದರು. ತಮ್ಮ ಉತ್ತಮನು ಅಪ್ಪನ ತೊಡೆಯ ಮೇಲೆ ಕುಳಿತು ಅವರ ಮುಂದಲೆಯ ಕೂದಲನ್ನು ಎಳೆಯುತ್ತಿದ್ದ. ಅವರು ನೋವಾದಂತೆ ನಟಿಸುತ್ತಾ ಮತ್ತೆ ಮಗನನ್ನು ಪಕ್ಕನೆ ತಬ್ಬಿ ಮುದ್ದಾಡುತ್ತಿದ್ದರು. ನಾನು ಆಸೆ ತುಂಬಿದ ಕಂಗಳಿಂದ ನೋಡಿದೆ. ಬರಡು ನೆಲದ ಮೇಲೆ ಮಳೆ ಹನಿಯ ಸಿಂಚನವಾದೀತೇ ಎಂಬ ಕಾತರದಿಂದ! ನನ್ನ ಕಾಲಿನ ಕಿರುಗೆಜ್ಜೆ ದನಿಗೆ ಅಪ್ಪಾಜಿ ಇತ್ತ ಕಿವಿಯಾದರು. ಎನ್ನುತ್ತ ನೋಡಿ ಮಂದಹಾಸ ಬೀರಿದರು. ನಾನೂ ನಕ್ಕೆ, ಕೋಲ್ಮಿಂಚಿನಂತೆ!

'ಮಗೂ ಧ್ರುವಕುಮಾರ, ಊಟ ಮಾಡಿದೆಯ ಕಂದ?'

'ಆಯ್ತು ಅಪ್ಪಾಜಿ'

'ಇತ್ತ ಬಂದಿರುವೆಯಲ್ಲ, ಏನು ಸಂಗತಿ? ಅಮ್ಮ ಏನಾದರೂ ಹೇಳಿ ಕಳಿಸಿದಳೇನು?'

'ಇಲ್ಲ' ಹೇಳುವಾಗ ನನ್ನ ತಲೆ ಜೋರಾಗಿಯೇ ಅತ್ತಿತ್ತ ಆಡಿತು. ಆದರೆ ದನಿ ಹೂತು ಹೋಗಿತ್ತು. ಏನಾದರೂ ಕೆಲಸವಿದ್ದರೆ ಮಾತ್ರ ಇತ್ತ ಬರಬೇಕೆ? ಸುಮ್ಮನೆ ಬರಬಾರದೆ? ಉತ್ತಮನಂತೆ ನಾನೂ ಕೂಡಾ ಅವರ ಮಗ! ಅಪ್ಪನ ಇನ್ನೊಂದು ತೊಡೆಯಲ್ಲಿ ನಾನೂ ಕೂರಬಹುದಾದಷ್ಟು ಜಾಗವಿದೆ. 'ಬಾ ಕಂದಾ ನೀನೂ ಕುಳಿತುಕೋ' ಎನ್ನಬಹುದೇ ಅಪ್ಪಾಜಿ?

ನೀಲಸಾಗರದಲ್ಲಿ ಸೂರ್ಯದೇವನು ಪ್ರತಿಫಲಿಸಿ ಹೊಳೆದಂತೆ ಎನ್ನ ಕಣ್ಣುಗಳು ಆಸೆಯಿಂದ ಹೊಳೆದವು. ಅಪ್ಪನ ಬಸವಳಿದ ಕಣ್ಣುಗಳಲ್ಲೂ ನನ್ನ ಬಗೆಗೆ ಪ್ರೀತಿ ಇದ್ದುದನ್ನು ನಾನು ಗಮನಿಸಿದೆ. ಆದರೆ ಅಪ್ಪ ಏನೋ ಹೇಳಲು ಬಾಯ್ದೆರೆಯುತ್ತಿದ್ದಂತೆಯೇ ಅಲ್ಲಿ ಚಿಕ್ಕಮ್ಮ ಸುರುಚಿಯ ಆಗಮನವಾಯಿತು. ಅಪ್ಪ ತುಟಿ ಹೊಲಿದು ಕೂತರು. ಚಿಕ್ಕಮ್ಮನ ಬಗೆಗೆ ನನಗೂ ಭಯವಿಲ್ಲದಿಲ್ಲ. ಆದರೆ ಗಾಳಿ ಜೋರಾಗಿ ಬೀಸಿದರೆ ತರಗೆಲೆಗಳು ಉಳಿಯುವವೇ? ಅಪ್ಪನ ಮಡಿಲಲ್ಲಿ ಕೂರುವ ನನ್ನ ಬಹುದಿನಗಳ ಹಂಬಲ ಅದಮ್ಯವಾಗಿತ್ತು. ಹಾಗಾಗಿ ನಾನು ಧೈರ್ಯದಿಂದ, 'ಅಪ್ಪಾಜಿ, ನಿನ್ನ ತೊಡೆಯಲ್ಲಿ ನನ್ನನ್ನೂ ಕೂರಿಸಿಕೋ' ಎಂದು ನಿರೀಕ್ಷೆಯಿಂದ ನುಡಿದೆ. ಆದರೆ ಉತ್ತರಿಸಿದ್ದು ಅಪ್ಪನಲ್ಲ, ಚಿಕ್ಕಮ್ಮ!



'ಈ ಸಾಮ್ರಾಜ್ಯದ ದೊರೆ, ಉತ್ಥಾನ ಪಾದರ ತೊಡೆಯ ಮೇಲೆ ಕೂರಲು ನಿನಗೆ ಯಾವ ಯೋಗ್ಯತೆಯಿದೆ? ನತದೃಷ್ಟೆ ಸುನೀತಿಯ ಹೊಟ್ಟೆಯಿಂದ ಹುಟ್ಟಿದೆಯಲ್ಲೋ ಅದೃಷ್ಟಹೀನ? ಇನ್ನೊಂದು ಜನ್ಮದಲ್ಲಿ ನನ್ನ ಉದರದಿಂದ ಹುಟ್ಟಿ ಬಾ. ಆಗ ಕೂರುವೆಯಂತೆ, ಉತ್ತಮನ ಅಪ್ಪನ ತೊಡೆಯ ಮೇಲೆ!' ಚಿಕ್ಕಮ್ಮ ತಾತ್ಸಾರದಿಂದ ಹೇಳಿ ನಕ್ಕಾಗ ಅವಮಾನದಿಂದ ಕುಸಿದುಹೋದೆ. ಈ ಭೂಮಿ ಬಾಯ್ದೆರೆದು ನನ್ನನ್ನು ನುಂಗಬಾರದೇ ಎನಿಸಿತು ನನಗೆ. ನಾನು ಅಪ್ಪನ ಮೊಗವನ್ನು ನೋಡಿದೆ. ಅಲ್ಲಿದ್ದುದು ಕೇವಲ ಅಸಹಾಯಕತೆ. ಮಮತೆ ಮತ್ತು ಮಾನವೀಯತೆಯನ್ನು ಹೇಡಿತನವು ನುಂಗಿ ಹಾಕಿತ್ತು. ಅಳುತ್ತಾ ಅಲ್ಲಿಂದ ಓಡಿದವನು ಅಮ್ಮನ ಮಡಿಲು ಸೇರಿದೆ. ಆಕೆ ಮಹಾಮಾತೆ ಸುನೀತಿ.

'ಅಮ್ಮಾ, ನಾನು ಅಪ್ಪನ ಮಗನಲ್ಲವೆ?'

'ಇದೆಂಥ ಪ್ರಶ್ನೆ ಕಂದ?'

'ಹೇಳಮ್ಮ ನಾನು ಯಾರು?'

'ನೀನು ಮಹಾರಾಜ ಉತ್ಥಾನಪಾದರ ಪಟ್ಟದ ರಾಣಿ ಸುನೀತಿಯ ಮುದ್ದು ಕಂದ! ಈ ರಾಜ್ಯದ ಯುವರಾಜ! ಮಹಾರಾಜರ ಜ್ಯೇಷ್ಠ ಪುತ್ರ! ಸಮಾಧಾನವಾಯಿತೆ?' ಅಮ್ಮ ನನ್ನನ್ನು ಮುದ್ದಿಸುತ್ತಾ ಅಕ್ಕರೆಯಿಂದ, ಹೆಮ್ಮೆಯಿಂದ ನುಡಿದಳು.

'ಮತ್ತೆ? ಅಪ್ಪನಿಗೇಕೆ ಉತ್ತಮನಲ್ಲಿ ಹೆಚ್ಚು ಪ್ರೀತಿ? ನನ್ನನ್ನು ಕಂಡರೆ ಬೇಸರ?'

'ನೀನು ಹಾಗೆ ತಪ್ಪು ತಿಳಿದುಕೊಂಡಿರುವಿ ಕಂದಾ. ಮಹಾರಾಜರಿಗೆ ನೀನೆಂದರೆ ತುಂಬಾ...ತುಂಬಾ ತುಂಬಾ... ಪ್ರೀತಿಯಿದೆ'

'ಹಾಗೆ ಹೇಳಿದರೆ ನಿನ್ನಲ್ಲಿ ಅವರು?'

'ಹೌದು ಕಂದ, ಹೇಳಿದರು. ನೂರು ಬಾರಿ, ಸಾವಿರ ಬಾರಿ!'

'ಸಾವಿರ ಬಾರಿ? ಹಾಗಾದರೆ ನನ್ನಲ್ಲಿ ಏನೂ ಹೇಳಲೇ ಇಲ್ಲ? ನನ್ನ ಎತ್ತಿಕೊಳ್ಳಲಿಲ್ಲ. ಅಪ್ಪಿ ಮುದ್ದಿಸಲಿಲ್ಲ. ಯಾವಾಗಲೂ ಉತ್ತಮನೊಬ್ಬನೇ ಅಪ್ಪನ ತೊಡೆಯಲ್ಲಿ ಕೂರುವನು?'

'ಯಾವುದಕ್ಕೂ ಸಮಯ ಬರಬೇಕು ಕಂದ'

'ಸಮಯ ಯಾವಾಗ ಬರುತ್ತದೆ ಅಮ್ಮ? ಚಿಕ್ಕಮ್ಮನನ್ನು ಬಿಟ್ಟು ಅಪ್ಪ ಇಲ್ಲಿಗೆ ಬರುವುದೇ ಇಲ್ಲ. ನಾನು ಅಲ್ಲಿಗೆ ಹೋದರೆ ಚಿಕ್ಕಮ್ಮ ಗದರುವಳು. ನಾನು ಯುವರಾಜನಾದರೆ  ಯಾಕೆ ನನ್ನನ್ನು ತಡೆಯುವರು ಬಾಗಿಲಲ್ಲೇ?'

'ನನ್ನ ಗ್ರಹಚಾರ! ನಿನ್ನ ಅಪ್ಪನಿಗೆ ಅವಳಲ್ಲೇ ಹೆಚ್ಚು ಪ್ರೀತಿ. ಅದಕ್ಕಿಂತ ಹೆಚ್ಚಾಗಿ ಭೀತಿ!'

'ಅಮ್ಮಾ ಅಪ್ಪನಿಗೇಕೆ ಇಬ್ಬರು ಹೆಂಡತಿಯರು? ನಿನಗೇಕೆ ಒಬ್ಬನೇ ಗಂಡ?'

'ಶ್! ಅದು ಲೋಕದ ವ್ಯವಸ್ಥೆ, ಅಲ್ಲ, ಅವಸ್ಥೆ!'